# ಸಹಾಯಕ ಆಯುಕ್ತರವರ ನ್ಯಾಯಾಲಯ, ಹೊಸಪೇಟೆ.

ಎ.ವಿಲೇ.ನಂ.ಕಂ.ಪಹಣಿ:ಅಪೀಲು:66/2010-11 ದಿನಾಂಕ:21.04..2016.

**ಉಪಸ್ಥಿತರು: ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ**

**ಸಹಾಯಕ ಆಯುಕ್ತರು, ಹೊಸಪೇಟೆ**

*****

**ವಾದಿಗಳು: ಶ್ರೀ/ ಶ್ರೀಮತಿ**

1] ಹೆಚ್.ದುರುಗಪ್ಪ ತಂದೆ ದಿ॥ ಮರಿಯಪ್ಪ,
ವಾಸ: ಹೊಳಗುಂದಿ ಗ್ರಾಮ,
ಹಡಗಲಿ ತಾಲೂಕು

**[ಶ್ರೀ ಜಂಬಣ್ಣ.ಕೆ., ವಕೀಲರು, ಹೊಸಪೇಟೆ]**

**ಪ್ರತಿವಾದಿಗಳು: ಶ್ರೀ/ ಶ್ರೀಮತಿ**

1] ತಹಶೀಲ್ದಾರರು, ಹಡಗಲಿ,
2] ಉಪತಹಶೀಲ್ದಾರರು, ನಾಡಕಛೇರಿ, ಇಟ್ಟಗಿ,
3] ಚಾಕಾಲಿ ಬಸವ್ವ ತಂದೆ ಹರಿಶ್ಚಂದ್ರಪ್ಪ
ವಾಸ: ಹೊಳಗುಂದಿ ಗ್ರಾಮ, ಹಡಗಲಿ ತಾಲೂಕು

**[ಶ್ರೀ ಹೆಚ್.ವಿಶ್ವನಾಥ, ವಕೀಲರು, ಹೊಸಪೇಟೆ]**

**ವ್ಯಾಜ್ಯದ ಜಮೀನು:**

| ತಾಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಹಡಗಲಿ | ಇಟ್ಟಗಿ | ಹೊಳಗುಂದಿ | 1075/1 | 03 ಎಕರೆ 18 ಸೆಂಟ್ಸ್ |

**ಪೀಠಿಕೆ:-**

ಹಡಗಲಿ ತಾಲೂಕು ಇಟಗಿ ಹೋಬಳಿ ಹೊಳಗುಂದಿ ಗ್ರಾಮದ ಸ.ನಂ.1075/1 ವಿಸ್ತೀರ್ಣ: 03 ಎಕರೆ 18 ಸೆಂಟ್ಸ್ ವಿವಾದಾಸ್ಪದ ಜಮೀನಿಗೆ ಸಂಬಂಧಿಸಿದಂತೆ ಉಪತಹಶೀಲ್ದಾರರು, ಇಟಗಿ ಇವರ ಆದೇಶ ಸಂಖ್ಯೆ: ಸಂ/ಕಂ/ನಾಕಾಇ/ಪಹಣಿ/ವಿವಾದ/16/2009-10 ದಿನಾಂಕ:23.06.2010 ವನ್ನು ಪ್ರಶ್ನಿಸಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136[2] ರಡಿಯಲ್ಲಿ ವಾದಿಪರ ವಕೀಲರು ದಿನಾಂಕ:24.07.2010 ರಂದು ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

ವಾದಿಗಳ ಪರ ವಕೀಲರು ಸಲ್ಲಿಸಿದ ಕಡತವನ್ನು ಪರಿಶೀಲಿಸಿ, ನೈಸರ್ಗಿಕ ನ್ಯಾಯದ ಹಿತದೃಷ್ಟಿಯಿಂದ ಪ್ರಕರಣದ ವಿಚಾರಣೆಯನ್ನು ದಿನಾಂಕ;27.08.2010 ಕ್ಕೆ ನಿಗದಿಪಡಿಸಿ ಉಭಯಪಕ್ಷಗಳಿಗೆ ನೋಟಿಸು ಮೂಲಕ ತಿಳಿಸಿ ವಿಚಾರಣೆಯನ್ನು ಪ್ರಾರಂಭಿಸಿಸಲಾಯಿತು.

ವಾದಿಪರ ವಕೀಲರು ದಿನಾಂಕ:05.04.2016 ರಂದು ವಿಚಾರಣೆಗೆ ಹಾಜರಾಗಿ ವಾದಿಗಳು ಕಳೆದ 30 ವರ್ಷಗಳಿಂದ ಸದರಿ ವ್ಯಾಜ್ಯದ ಜಮೀನಿನ ಸ್ವಾಧೀನವನ್ನು ಹೊಂದಿರುವುದಾಗಿ ಇದನ್ನು ಪರಿಗಣಿಸದೇ ಉಪ ತಹಶೀಲ್ದಾರರು, ನಾಡಕಾರ್ಯಾಲಯ ಇಟ್ಟಗಿಯವರು ಸಹಾಯಕ ಆಯುಕ್ತರ ನ್ಯಾಯಾಲಯ ಹೊಸಪೇಟೆಯಲ್ಲಿ ಪರಿಹಾರ ಕಂಡುಕೊಳ್ಳಲು ಆದೇಶಿಸಿರುವುದು ಕಾನೂನು ಬಾಹಿರವಾಗಿರುತ್ತದೆಂದು ತಿಳಿಸಿರುತ್ತಾರೆ.

ಸದರಿ ಪ್ರಕರಣದಲ್ಲಿಯ ಎಲ್ಲಾ ದಾಖಲೆಗಳನ್ನು ಪರಿಶೀಲಿಸಲಾಗಿ, ವಾದಿಯಾದ ಶ್ರೀ ಹೆಚ್.ದುರುಗಪ್ಪ ಇವರು ಪ್ರತಿವಾದಿಗಳ ಹೆಸರು ಪಹಣಿ ಪತ್ರಿಕೆಯ ಕಾಲಂ 9 ರಲ್ಲಿ ಯಾವುದೋ ಒಂದು ಸಣ್ಣ ತಪ್ಪಿನಿಂದಾಗಿ ಬಂದಿರುವ ಕಾರಣ ಮತ್ತು ಸದರಿ ಜಮಿನು ತನ್ನ ಸ್ವಾಧೀನಾನುಭವದಲ್ಲಿರುವ ಕಾರಣ ಪ್ರತಿವಾದಿಗಳ ಹೆಸರಿನಲ್ಲಿ ಹಕ್ಕು ಬದಲಾವಣೆ ಮಾಡಬಾರದೆಂದು ಮನವಿ ಮಾಡಿಕೊಂಡಿರುತ್ತಾರೆ. ಆದರೆ ವಾದಿಯು ಸದರಿ ವ್ಯಾಜ್ಯದ ಜಮೀನು ತನ್ನ ಸ್ವಾಧೀನದಲ್ಲಿರುವ ಬಗ್ಗೆ ಪೂರಕ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಮೇಲಿನ ಎಲ್ಲ ಅಂಶಗಳನ್ನು ಪರಿಶೀಲಿಸಲಾಗಿ ಹಾಗೂ ಪ್ರಕರಣದಲ್ಲಿಯ ದಾಖಲೆಗಳ ಆಧಾರದ ಮೇಲೆ, ವಾದಿಯು ಸದರಿ ವ್ಯಾಜ್ಯದ ಜಮೀನನ್ನು ವ್ಯತಿರಿಕ್ತ ಸ್ವಾಧೀನತೆಯ ಬಗ್ಗೆ ಪ್ರತಿಪಾದಿಸಿರುವುದರಿಂದ ಈ ಬಗ್ಗೆ ಈ ನ್ಯಾಯಾಲಯವು ಪರಿಗಣಿಸುವ ಅಧಿಕಾರ ವ್ಯಾಪ್ತಿಯನ್ನು ಹೊಂದಿರದ ಕಾರಣ ಈ ಕೆಳಕಂಡಂತೆ

**-:ಆದೇಶ:-**

ಪೀಠಿಕೆಯಲ್ಲಿ ವಿವರಿಸಿದ ಸಂದರ್ಭ, ವಾಸ್ತವಾಂಶ, ಹಿನ್ನಲೆ ಮತ್ತು ಕಾರಣಗಳ ಆಧಾರದ ಮೇಲೆ **ಅಪೀಲನ್ನು ವಜಾಗೊಳಿಸುತ್ತಾ,** ಉಭಯ ಪಕ್ಷಗಾರರು ತಮ್ಮ ಹಕ್ಕಿನ ಬಗ್ಗೆ ಮಾನ್ಯ ಸಿವಿಲ್ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ಪರಿಹಾರ ಕಂಡುಕೊಳ್ಳಲು ಆದೇಶಿಸಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕೀಕರಣ ಮಾಡಿಸಿ, ತಪ್ಪುಗಳನ್ನು ಸರಿಪಡಿಸಿ, ಈ ದಿನ ದಿನಾಂಕ:21.04.2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ.

**[ಅವಿನಾಶ್ ಮೆನನ್ ರಾಜೇಂದ್ರನ್, ಭಾ.ಆ.ಸೇ]**
**ಸಹಾಯಕ ಆಯುಕ್ತರು,**
**ಹೊಸಪೇಟೆ**

ವಾದಿ : ಪ್ರತಿವಾದಿಗ್ಗಳಿಗೆ

<u>ಪ್ರತಿಯನ್ನು</u>:- ತಹಶೀಲ್ದಾರರು, ಹಡಗಲಿ ಇವರಿಗೆ ಸೂಕ್ತ ಕ್ರಮಕ್ಕಾಗಿ ಸಂಬಂಧಪಟ್ಟ ಮೂಲ ಕಡತದೊಂದಿಗೆ ರವಾನಿಸಿದೆ.